# ಆಹಾ ಸುದ್ದಿ!

★ ಸಸಿತೋಟ

ಲಂಡನ್ನಿನಲ್ಲಿ ಉಷ್ಣಾಂಶ ಭಾರಿ ಪ್ರಮಾಣದಲ್ಲಿ ಏರುತ್ತಿದೆಯಂತೆ. ಸುದ್ದಿ ಅದಲ್ಲ, ಜೋಯ್ ಬಾರ್ಜ್ ಎಂಬಾತ ಸೆಕೆ ತಡೆಯಲಾರದೆ ಕಚೇರಿಗೆ ಚಣ್ಣ ಧರಿಸಿ ಹೋಗಿದ್ದಕ್ಕೆ ಮೇಲಧಿಕಾರಿ ಅವನನ್ನು ಮನೆಗೆ ಕಳಿಸಿದನಂತೆ. ಸುಮ್ಮನಿರದ ಜೋಯ್ ತನ್ನ ತಾಯಿಯ ಉಡುಪು ಧರಿಸಿ ಕಚೇರಿಗೆ ಬಂದನಂತೆ. ಅಧಿಕಾರಿಗಳೇ ಸೋತು ಮುಕ್ಕಾಲು ಉದ್ದದ ಪ್ಯಾಂಟ್ ಧರಿಸಿ ಬರಲು ಅನುಮತಿ ನೀಡಿದ್ದಾರಂತೆ. ಚೌಕಾಶಿ ವ್ಯವಹಾರ ಡ್ರೆಸ್‌ಕೋಡ್‌ನಲ್ಲೂ ಇದೆಯಂತಾಯ್ತು. ಈತ ಕಾಲು ಭಾಗ ಇಳಿದರೆ, ಆತ ಕಾಲು ಭಾಗ ಏರಿಸಿದ.



ಜಪಾನಿನಲ್ಲಿ ವಿಚಿತ್ರ ಸಮಸ್ಯೆಗಳು ತಲೆದೋರುತ್ತಿವೆಯಂತೆ. ಸ್ನೇಹಿತೆ ಸಿಗದ ಅಥವಾ ಗೆಳತಿ ಕೈಕೊಟ್ಟ ಪುರುಷರು ಅಥವಾ ವಿಧುರರು ಸಿಲಿಕಾನ್ ಸೆಕ್ಸ್ ಡಾಲ್‌ಗಳನ್ನು ಗೆಳತಿಯಂತೆ ನಡೆಸಿಕೊಳ್ಳುವ ವಿಚಿತ್ರ ವಿದ್ಯಮಾನಗಳು ಹೆಚ್ಚಾಗುತ್ತಿವೆಯಂತೆ. ಆಹಾರ– ವಿಹಾರ– ವಿನೋದಗಳೆಲ್ಲ ಈ ಸಿಲಿಕಾನ್ ಬೊಂಬೆಗಳ ಜೊತೆಗೇ. ಹೆಂಡತಿಯಾದರೆ ಬದುಕಿನುದ್ದಕ್ಕೂ ಹೂಡಿಕೆ ಮಾಡುತ್ತ ಹೋಗಬೇಕು, ಬೊಂಬೆಯಾದರೆ ಒಂದು ಬಾರಿಯ ಹೂಡಿಕೆಯಷ್ಟೆ.



ಸಿಡಿಗಳನ್ನೆಲ್ಲ ಸೇರಿಸಿ ತಯಾರಿಸಿದ ಈ ದಿರಿಸು ಉಕ್ರೇನಿನ ನೀರೆಯ ದೇಹವನ್ನಲಂಕರಿಸಿದೆ. ಅಲ್ಲಿ ಪರಿಸರ ರಕ್ಷಣೆ ಬಗ್ಗೆ ಜಾಗೃತಿ ಚೆನ್ನಾಗೇ ನಡೆಯುತ್ತಿರಬಹುದು.



ಟೋಕಿಯೋದ ಐಟಿ ಕಂಪೆನಿಯಲ್ಲಿ ಉದ್ಯೋಗಿಗಳು ಕುರ್ಚಿಯ ಮೇಲೂ ಕೂಡದೆ, ಮಧ್ಯೆ ಮಧ್ಯೆ ವ್ಯಾಯಾಮ ಮಾಡುತ್ತ ಕೆಲಸ ಮಾಡುತ್ತಾರಂತೆ. ಉತ್ಪಾದಕತೆ ಜಾಸ್ತಿಯಾಗಲು ಹಲವು ಕಂಪೆನಿಗಳು ಈ ಐಡಿಯಾಗೆ ಮುಗಿಬಿದ್ದಿವೆಯಂತೆ. ವೃದ್ಧರ ಸಂಖ್ಯೆ ಏರುತ್ತಿರುವುದು, ಉದ್ಯೋಗಿಗಳ ಕೊರತೆಯಾಗಿರುವುದು ಇದಕ್ಕೆಲ್ಲ ಕಾರಣವಂತೆ. ಇಷ್ಟೆಲ್ಲ ಕಷ್ಟಪಡುವುದು ಬಿಟ್ಟು ಮಕ್ಕಳ ಉತ್ಪಾದನೆ ಬಗ್ಗೆ ಗಮನ ಕೊಡಬಹುದಿತ್ತು.



ಕೆಸರು ಗದ್ದೆಯ ಓಟ, ಹೊರಳಾಟವೆಲ್ಲ ಈಗ ಹಳೆಯ ಸುದ್ದಿ. ಬ್ರುಸೆಲ್ಸ್‌ನಲ್ಲಿ 'ಕೆಸರು ದೇವತೆ' ಎಂಬ ಸ್ಪರ್ಧೆ ಇತ್ತೀಚೆಗೆ ನಡೆಯಿತಂತೆ. ಮೇಕಪ್ ಮಾಡಿಕೊಂಡು ಬಂದವರೆಲ್ಲ ಕೆಸರಿನ ಅಸುರ ಪ್ರಶಸ್ತಿ ಪಡೆದುಕೊಂಡವರಂತೆ ಮುಖ ಮಾಡಿದರಂತೆ.

ಅಮೆರಿಕದ ಕೆಂಟುಕಿಯಲ್ಲಿ ನಾಯಿಯೊಂದನ್ನು ಮೇಯರ್ ಆಗಿ ಆಯ್ಕೆ ಮಾಡಲಾಗಿದೆಯಂತೆ. ಅದು ಮತದಾರರ ಕಡೆ ಹಲ್ಲು ಕಿರಿದು ಮತ ಗಿಟ್ಟಿಸಿದ್ದೇನೋ ಸರಿ. ಆದರೆ ತನ್ನ ಮೈ ನೆಕ್ಕಿ ಕ್ಲೀನ್ ಮಾಡಿಕೊಳ್ಳುವ ಅದರ ನಡವಳಿಕೆಗೆ ವಿರೋಧಿಗಳು ಮೂಗು ಸಿಂಡರಿಸುತ್ತಿದ್ದಾರಂತೆ. ಬೆಂಬಲಿಗರು ಮಾತ್ರ ಮಾನ್ಯ ಮೇಯರ್ ಯಾವುದೇ ಭ್ರಷ್ಟಾಚಾರಕ್ಕೆ ಹೋಗದೇ ಕ್ಲೀನ್ ಆಗಿ ಆಡಳಿತ ನಡೆಸುವ ದ್ಯೋತಕವಿದು ಎಂದು ಸಮರ್ಥಿಸಿಕೊಳ್ಳುತ್ತಿದ್ದಾರಂತೆ.